# ಶರಣು ಶರಣು ಶರಣ್ಯವಂದಿತ ಶಂಖ ಚಕ್ರ ಗಧಾಧರ

1. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 90.
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 207.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 528.
4. **Note:** The wordings are as per Ref. 1. The wordings in Ref. 2 and Ref. 3 are slightly different and have not been mentioned here.
5. **Note:** The singer has followed the lyrics as in Ref. 1 and are fully matching.

ರಾಗ: ಗೌಳ ತಾಳ: ತ್ರಿವಿಡೆ

ಶರಣು ಶರಣು ಶರಣ್ಯವಂದಿತ ಶಂಖ ಚಕ್ರ ಗಧಾಧರ ॥ ಪ ॥
ಶರಣು ಸರ್ವೇಶ್ವರ ಅಹೋಬಲ ಶರಣ ಸಲಹೋ ನರಹರಿ ॥ ಅಪ ॥

ಶೀಲದಲಿ ಶಿಶು ನಿನ್ನ ನೆನೆಯಲು ಕಾಲಲೊತ್ತುತ ಖಳರನು
ಲೀಲೆಯಿಂದಲಿ ಚಿಟಿಲು ಭುಗಿ ಭುಗಿಲೆನುತ ಉಕ್ಕಿನ ಕಂಬದಿ
ಖೂಳ ದೈತ್ಯನ ತೋಳಿನಿಂದಲಿ ಸೀಳಿ ಹೊಟ್ಟೆಯ ಕರುಳನು
ಮಾಲೆಯನು ಕೊರಳೊಳಗೆ ಧರಿಸಿದ ಜ್ವಾಲ ನರಸಿಂಹ ಮೂರ್ತಿಗೆ ॥ ೧ ॥

ಖಳ ಖಳಾ ಖಳನೆಂದು ಕೂಗಲು ಕೋಟಿ ಸಿಡಿಲಿನ ರಭಸದಿ
ಜಲಧಿ ಗುಳ ಗುಳನೆದ್ದು ಉಕ್ಕಲು ಜ್ವಲಿತ ಕುಲಗಿರಿ ಉರುಳಲು
ನೆಲನು ಬಳ ಬಳನೆಂದು ಬಿರಿಯಲು ಕೆಳಗೆ ದಿಗ್ಗಜ ನಡುಗಲು
ಥಳ ಥಳಾ ಥಳ ಹೊಳೆವ ಮಿಂಚಿನೊಲ್ ಹೊಳೆವ ನರಸಿಂಹ ಮೂರ್ತಿಗೆ ॥ ೨ ॥

ಕೋರೆ ಕೆಂಜೆಡೆ ಕಣ್ಣು ಕಿವಿ ತೆರೆ ಬಾಯಿ ಮೂಗಿನ ಶ್ವಾಸದಿ
ಮೇರುಗಿರಿ ಮಿಗಿ ಮಿಗಿಲು ಮಿಕ್ಕುವ ತೋರ ಕಿಡಿಗಳ ಸೂಸುತ

ಸಾರಿ ಸಾರಿಗೆ ಹೃದಯ ರಕುತವ ಸೂರೆ ಸುರಿ ಸುರಿದೆರಗುತ
ಘೋರ ರೂಪಗಳಿಂದ ಮೆರೆಯುವ ಧೀರ ನರಹರಿ ಮೂರ್ತಿಗೆ ॥ ೩ ॥

ಹರನು ವಾರಿಜಭವನು ಕರಗಳ ಮುಗಿದು ಜಯ ಜಯವೆನುತಿರೆ
ತರಳ ಪ್ರಹ್ಲಾದನಿಗೆ ತಮ್ಮಯ ಶರೀರ ಬಾಧೆಯ ಪೇಳಲು
ಕರುಣಿ ಎನ್ನನು ಕರುಣಿಸೆನ್ನಲು ತ್ವರದಲಭಯವ ನೀಡುತ
ಸಿರಿ ಬರಲು ತೊಡೆಯಲ್ಲಿ ಧರಿಸಿದ ಶಾಂತ ನರಹರಿ ಮೂರ್ತಿಗೆ ॥ ೪ ॥

ವರವ ಬೇಡಿದನಿರುವ ತಂದೆಯ ಪರಿಯನೆಲ್ಲವ ಬಣ್ಣಿಸಿ
ನಿರುತದಲಿ ನಿನ್ನೆರಡು ತೊಡೆಯಲಿ ಶರೀರವಿರಲೆಂದೆನುತಲಿ
ಸುರರು ಪುಷ್ಪದ ವೃಷ್ಟಿಗರೆಯಲು ಸರಸಿಜಾಕ್ಷನು ಶಾಂತದಿ
ಸಿರಿಯ ಸುಖವನು ಮರೆದ ಹೋಬಲ ವರದ ಪುರಂದರ ವಿಠಲಗೆ ॥ ೫ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಇದು ಅಹೋಬಲ ಕ್ಷೇತ್ರದಲ್ಲಿಯ ಶ್ರೀ ನರಸಿಂಹನ ಸ್ತುತಿ.

**ಶರಣ್ಯ** = ಶರಣು ಬಂದವರು = ಭಕ್ತರು

**ಶೀಲಾ** = ಶುದ್ಧಾಚರಣೆ

**ಶಿಶು** – ಪ್ರಹ್ಲಾದನು.

**ಖಳನನು** – ಪ್ರಹ್ಲಾದನ ತಂದೆಯಾದ ಹಿರಣ್ಯಕಶಿಪುವನ್ನು.

**ಖಲನು** – ರಾಕ್ಷಸನು.

ಖಲವು ಔಷಧ ದ್ರವ್ಯಗಳನ್ನು ಸೇರಿಸಿ ಕುದಿಯಲೆಂದು ಇರಿಸಿದ ನೀರು.

**ಕುಲಗಿರಿ** – ಸಪ್ತ ಪರ್ವತಗಳು; ಕುಲಾಚಲ; ನೀಲ, ನಿಷಧ, ವಿಂಧ್ಯ, ಪಾರಿಯಾತ್ರ ಮೊದಲಾದ ಎತ್ತರದ ಬೆಟ್ಟಗಳು.

**ನೆಲನು** – ನೆಲವು.

**ದಿಗ್ಗಜ =** ಎಂಟು ದಿಗ್ಗಜಗಳು

**ದಿಗ್ದೆಸೆ** – ಎಂಟು ದಿಕ್ಕುಗಳು ಇರುವ ಪ್ರದೇಶಗಳು; ಎಂದರೆ ಸುತ್ತಲೂ,

**ಕೋರೆ** – ಕೋರ (ಘೋರ), ಕಣ್ಣು ಕೋರೈಸುವ.

**ದಿವ್ಯಕುಲಿಶ ಕೋರೆ** – ಪರ್ವತಗಳನ್ನೂ ಸೀಳಬಲ್ಲ ವಜ್ರಾಯುಧ (ಇಂದ್ರನದು), ಕುಲಿಶ; ಅದರಂತೆ ಹರಿತವಾಗಿ ಇರುವ ಕೋರೆದಾಡೆಗಳುಳ್ಳ.

**ಹರನು ವಾರಿಜಭವನು** – ಶಿವನೂ, ಬ್ರಹ್ಮನೂ.

**ಸಿರಿಯ ಸಹಿತದಿ ಮೆರೆದ** – ಲಕ್ಷ್ಮೀನರಸಿಂಹಮೂರ್ತಿ; ಬೆಟ್ಟದ ಕೆಳಗಿರುವುದು; ಪ್ರಹ್ಲಾದವರದ.

**ಜ್ವಾಲಾ ನರಸಿಂಹ =** ಅಹೋಬಲದಲ್ಲಿರುವ ಒಂಬತ್ತು (೯) ನರಸಿಂಹ ಮೂರ್ತಿಗಳಲ್ಲಿ ಒಂದು. ( ೧. ಜ್ವಾಲಾ ನರಸಿಂಹ, ೨. ಅಹೋಬಲ ನರಸಿಂಹ, ೩. ಮಾಲೋಲ ನರಸಿಂಹ (ಲಕ್ಷ್ಮೀ ನರಸಿಂಹ), ೪. ಕ್ರೋಡಾಕಾರ ನರಸಿಂಹ, ೫. ಕಾರಂಜ ನರಸಿಂಹ, ೬. ಭಾರ್ಗವ ನರಸಿಂಹ, ೭. ಯೋಗಾನಂದ ನರಸಿಂಹ, ೮. ಛತ್ರವಾಟ ನರಸಿಂಹ ಮತ್ತು ೯. ಪಾವನ ನರಸಿಂಹ)

**Classification:** Keerthane
**Ankita:** varada purandara vittala
**Location:** Ahobala, Andhra Pradesh
**Category:** Narasimha Stuti, Mahatmya Gnana
**Sub-Category:** Narasimha, sharana, udara, kivi, bayi, kannu, hrudaya, prahallada, tande, deha, pushpa, sukha, shankha, chakra
**Pravachana:** NA
**Explanation:** NA